13

# ಯೇಸುವಿನ ಶೋಧನೆ

## ಮತ್ತಾಯ 4:1-11, ಒಂದು ನಿಕಟ ನೋಟ

ಯೇಸುವಿನ ಸೇವೆಯ ಆರಂಭದಲ್ಲೇ, ಸೈತಾನನೊಂದಿಗೆ ಉಗ್ರ ಹೋರಾಟವನ್ನು ಮಾಡಿದನು.[1] ದುಷ್ಟನು ಆತನ ಮುಂದೆ ಬಲವಾಗಿ ಕಾಣಿಸಿಕೊಂಡನು. ಈ ವಿಧವಾದ ವಿರೋಧ ಆತನಿಗೆ ಇನ್ನೆಲ್ಲಿಯೂ ಉಂಟಾಗಲಿಲ್ಲ. ಇದು ಯೇಸುವಿನ ಶೋಧನೆಯ ಕುರಿತ ಅಧ್ಯಯನವಾಗಿದೆ.[2]

ಆ ಶೋಧನೆಯ ಕುರಿತ ಮೂರು ಸಂಗತಿಗಳನ್ನು ಗಮನಿಸೋಣ ...

(1) ಇದರ *ಸ್ಥಳ*: ಅದು ಅರಣ್ಯ ಪ್ರದೇಶವಾಗಿತ್ತು. ಅದು ನಿರ್ಜನ ಪ್ರದೇಶವಾಗಿ, ಹೋರಾಟಕ್ಕೆ ಮೀಸಲಾದ ಸ್ಥಳವಾಗಿತ್ತು.[3] ಅದು ಶೋಧನೆಯು ಕಾಯುವಂತ ಸ್ಥಳವಾಗಿತ್ತು. ಅದಾಮನು ಪಾಪ ಮಾಡಿ ಎದೆನ್ ತೋಟವನ್ನು ನಿರ್ಜನ ಪ್ರದೇಶವಾಗಿ ಮಾಡಿದರೆ, ಯೇಸು ಪಾಪದ ಮೇಲೆ ಜಯವನ್ನು ಹೊಂದಿ ಅರಣ್ಯ ಪ್ರದೇಶವನ್ನು ಏದೇನ್ ತೋಟವನ್ನಾಗಿ ಪರಿವರ್ತಿಸಿದನು ಎಂಬ ಹೇಳಿಕೆಯಿದೆ.

(2) ಇದರ *ವಿರೋಧಿಗಳು*: ದೀಕ್ಷಾಸ್ನಾನ ಹೊಂದಿದ್ದ ಯೇಸು ಅಲ್ಲಿದ್ದನು, ಈ ಸಮಯದಲ್ಲಿ ದೇವರು ಆತನ ಕುರಿತು ಸಾಕ್ಷಿ ನೀಡಿದ್ದನು. ಆತನು ನೀರಿನಿಂದ ಮೇಲೆ ಬಂದು, ಸೇವೆಯನ್ನು ಆರಂಭಿಸಲು ಸಿದ್ಧನಾಗಿದ್ದನು. ಅಲ್ಲಿ ಸೈತಾನನು ಸಹ ಇದ್ದನು. ಈ ಅರಣ್ಯದ ಅನುಭವದಲ್ಲಿ, ಯೇಸು, ವಾಯುಮಂಡಲದ ಅಧಿಕಾರಿಯಾದ, ಲೋಕದ ದೇವರಾದ, ಆಕಾಶಮಂಡಲದ ದುರಾತ್ಮಗಳಾದ, ಸೈತಾನನ್ನು ಮುಖಾ ಮುಖಿಯಾಗಿ ಎದುರಾದನು (2 ಕೊರಿಂಥ 4:4; ಎಫೆಸ 2:2; 6:12).

(3) ಇದರ *ವಿಶೇಷ ಅರ್ಥ*: ಈ ಹೋರಾಟ ಆಕಸ್ಮಿಕವಾಗಿ ಸಂಭವಿಸಲಿಲ್ಲ. ಮತ್ತಾಯ 4:1ರಂತೆ, "ಆಗ ಯೇಸು ಸೈತಾನನಿಂದ ಶೋಧಿಸಲ್ಪಡುವದಕ್ಕಾಗಿ *ಆತ್ಮನು ಆತನನ್ನು* ಅಡವಿಗೆ ಒಯ್ದನು" (ಒತ್ತಿ ಹೇಳಿದ್ದು ನನ್ನದು). ಇದು ದೈವೀಕ ಯೋಜನೆಯಾಗಿತ್ತು. ಈಗ ಸೈತಾನನು ಸಾಮಾನ್ಯವಾಗಿ ಮಾಡುವದಿಲ್ಲ. ಅವನು ರಹಸ್ಯವಾಗಿ ತನ್ನ ಅನುಯಾಯಿಗಳ ಮೂಲಕ ಹೋರಾಟ ಮಾಡುತ್ತಾನೆ. ದೇವರ ಉದ್ದೇಶಗಳು ಈಡೇರುವಂತೆ, ಅವನು ಯೇಸುವಿಗೆ ಮುಖಾಮುಖಿಯಾಗಿ ಒತ್ತಾಯಕ್ಕೆ ಒಳಗಾದನು.

ಸೈತಾನನು ಬಹಿರಂಗವಾದ ಹೋರಾಟಕ್ಕೆ ಒತ್ತಾಯಿಸಲ್ಪಟ್ಟನು ಎಂಬ ಅಧ್ಯಯನವು ಇದಾಗಿರುತ್ತದೆ. ಇದರಿಂದ ಅವನ ಹೋರಾಟದ ಕ್ರಮಗಳು ಬಹಿರಂಗವಾಗಿದೆ. ಯೇಸುವಿನ ಉಂಟಾದ ಈ ಮೂರು ಶೋಧನೆಗಳ ಮೂಲಕ, ಸೈತಾನ ಕುಯುಕ್ತಿಗಳು ಹೇಗಿರುತ್ತವೆಂದು ಹೆಚ್ಚು ಗಮನಿಸೋಣ. ಸಾವಿರಾರು ವರ್ಷಗಳಿಂದ ಸೈತಾನನು ಜನರನ್ನು ವಂಚಿಸಿದ್ದಾನೆ. ಅವನ ಸಾವಿರಾರು ವರ್ಷಗಳ ಯೋಜನೆಗಳನ್ನು ಸೈತಾನನು ಯೇಸುವಿನ ಮೇಲೆ ಪ್ರಯೋಗಿಸಿದನು.

### ಮೊದಲ ಶೋಧನೆ (4:1-4)

ದೈಹೀಕವಾದ ಮೊದಲ ಶೋಧನೆಯನ್ನು ಸೈತಾನನು ತಂದನು.

### ಸೈತಾನ (ವಚನಗಳು 1-3)

> ... ಆಗ ಯೇಸು ಸೈತಾನನಿಂದ ಶೋಧಿಸಲ್ಪಡುವದಕ್ಕಾಗಿ[4] ಆತ್ಮನು ಆತನನ್ನು ಅಡವಿಗೆ ಒಯ್ದನು. ಆತನು ನಾಲ್ವತ್ತು ದಿವಸ ಹಗಲಿರುಳು[5] ಉಪವಾಸವಿದ್ದ ತರುವಾಯ ಆತನಿಗ ಹಸಿವಾಯಿತು, ಆಗ ಆ ಶೋಧಕನು ಆತನ ಬಳಿಗೆ ಬಂದು - ನೀನು ದೇವರ ಮಗನಾಗಿದ್ದರೆ ಈ ಕಲ್ಲುಗಳು ರೊಟ್ಟಿಯಾಗುವಂತೆ ಅಪ್ಪಣೆಕೊಡು ಎಂದು ಹೇಳಲು ಆತನು ... (ವಚನಗಳು 1-3).

ಮೊದಲನೆಯದಾಗಿ ಸೈತಾನನು, ದೇವರು ಮತ್ತು ಯೇಸುವಿನ ನಡುವೆ ಇದ್ದ ಯಥಾರ್ಥತೆಯನ್ನು ಪರೀಕ್ಷಿಸಿದನು. ಅವನು ಯೇಸುವಿಗೆ ಸವಾಲನ್ನು ನೀಡಿ: "ನೀನು ದೇವರ ಮಗನಾಗಿದ್ದರೆ, ಈ ಕಲ್ಲುಗಳನ್ನು ರೊಟ್ಟಿಯಾಗುವಂತೆ ಮಾಡು" (ವಚನ 3ಬಿ). ನಾಲ್ವತ್ತು ದಿವಸಗಳ ಹಿಂದೆ ಆತನು ಒಂದು ಸ್ವರವನ್ನು ಕೇಳಿ" ಈತನು ನನ್ನ ಪ್ರಿಯನಾಗಿರುವ ಮಗನು, ಈತನನ್ನು ಮೆಚ್ಚಿದ್ದೇನೆ ಎಂಬದೆ (ಮತ್ತಾಯ 3:17). ಆದರೆ ಈಗ "ಸೈತಾನನು" ಆ ಸ್ವರದ ಪ್ರಕಾರ - ನೀನು ನಿಜವಾದ ದೇವರ ಮಗನಾಗಿದ್ದರೆ - ನಿನಗೇಕೆ ಹಸಿವು? ಅವಕಾಶವಿಲ್ಲದ ಸ್ಥಾನವೇಕೆ? ಕಲ್ಲನ್ನು ರೊಟ್ಟಿ ಮಾಡುವದರಿಂದ ಯೇಸು ಎರಡು ವಿಧವಾದ ಉದ್ದೇಶಗಳನ್ನು ಈಡೇರಿಸುವನು ಎಂಬದು ಸೈತಾನನ ಆಲೋಚನೆಯಾಯಿತು: ಯೇಸು ತನ್ನ ನ್ಯಾಯಯುತವಾದ ಕೊರತೆಯನ್ನು ನೀಗಿಸುವದು (ಹಸಿವನ್ನು), ಹಾಗೂ ತಾನು ದೇವರ ಮಗನೆಂಬದನ್ನು ನಿರೂಪಿಸುವನು.

ಒಂದು ವೇಳೆ, ನಾನು ಯೇಸುವಿನ ಸ್ಥಾನದಲ್ಲಿದ್ದರೆ, "ಸೈತಾನನೇ, ನಾನು ಯಾರೆಂದು ನಿನಗೆ ತಿಳಿಸುತ್ತೇನೆ" ಎಂದು ಹೇಳಿ, ಆ ಕಲ್ಲನ್ನು ಪರಿವರ್ತಿಸಿಬಿಡುತ್ತಿದ್ದೆ. ಆ ಸವಾಲಿನಿಂದ ಹಿಂದಿರುಗಲು ಇಚ್ಛಿಸುತ್ತಿರಲಿಲ್ಲ, ಬಹುಶಃ ನೀವುಗಳು ಸಹ.

### ಕ್ರಿಸ್ತನು (ವಚನ 4)

ಸೈತಾನನ ವಿಧಾನಗಳನ್ನು ಯೇಸು ಪರಿಶೀಲಿಸಿ,[6] "ಮನುಷ್ಯನು ರೊಟ್ಟಿ ತಿಂದ ಮಾತ್ರದಿಂದ ಬದುಕುವದಿಲ್ಲ" ಎಂದು ಬರೆದದೆ ಎಂದು ಹೇಳಿ, ಶೋಧನೆಗೆ ವಿರೋಧವಾದ ಆಯುಧ "ದೇವರ ವಾಕ್ಯವೇ" ಎಂದು ನಿರೂಪಿಸಿದನು. ಕೀರ್ತನೆ ಗಾರನು, "ನಿನಗೆ ವಿರೋಧವಾಗಿ ಪಾಪ ಮಾಡದಂತೆ ನಿನ್ನ ನುಡಿಗಳನ್ನು ನನ್ನ ಹೃದಯದಲ್ಲಿಟ್ಟುಕೊಂಡಿದ್ದೇನೆ" ಎಂದಿರುವನು (ಕೀರ್ತನೆ 119:11). ದೇವರ ವಾಕ್ಯದ ಆಯುಧದಿಂದ ಸೈತಾನನನ್ನು ಎದುರಿಸಬಹುದಾಗಿದೆ!

ಧರ್ಮೋಪದೇಶಕಾಂಡ 8:3 ಇದಕ್ಕೆ ಸಂಬಂಧ ಪಟ್ಟ ವಾಕ್ಯವಾಗಿದೆ, "ಮನುಷ್ಯನು ರೊಟ್ಟಿತಿಂದ ಮಾತ್ರಕ್ಕೆ ಬದುಕದೆ, ದೇವರ ಬಾಯಿಂದ ಹೊರಟ ಪ್ರತಿಯೊಂದು ಮಾತಿನಿಂದ ಬದುಕುವನು" (ವಚನ 4ಬಿ). "ಮನುಷ್ಯನು" ಎಂಬದು ಮೊದಲನೆಯ ಪದ: "ಮನುಷ್ಯನು ರೊಟ್ಟಿಯಿಂದ ಬದುಕುವದಿಲ್ಲ ..." ಅರಣ್ಯದಲ್ಲಿನ ನಾಲ್ವತ್ತು ದಿವಸಗಳ ಕಾಲದ ಶೋಧನೆ ಅದು ಯೇಸುವಿನ ಧೈವತ್ವದ ಶೋಧನೆಯಾಗಿರದೆ, ಆತನ ಮನುಷ್ಯತ್ವದ ಶೋಧನೆಯಾಗಿತ್ತು. ಅದರಲ್ಲಿ ಯೇಸು ದೇವರೆಂದು ನಿರೂಪಿಸುವ ಉದ್ದೇಶವಾಗಿರದೆ, ಆತನು ಪರಿಪೂರ್ಣ ಮನುಷ್ಯನಾಗಿ, ದೇವರ ಚಿತ್ತವನ್ನು ಪರಿಪೂರ್ಣವಾಗಿ ನೆರವೇರಿಸುವವನು ಎಂದು ನಿರೂಪಿಸುವದೇ ಉದ್ದೇಶವಾಗಿತ್ತು.

ನಂತರ ರೊಟ್ಟಿ ಮತ್ತು ಪ್ರತಿಯೊಂದು ದೇವರ ಮಾತು ಎಂಬುದನ್ನು ಗಮನಿಸಿರಿ, ಯೇಸು ರೊಟ್ಟಿ ಅಥವಾ ದೇವರ ಚಿತ್ತವನ್ನು ಆಯ್ಕೆ ಮಾಡಬಹುದಿತ್ತು. ದೇವರ ಚಿತ್ತವನ್ನು ನೆರವೇರಿಸುವದಕ್ಕಾಗಿ, ಯೇಸು ಹಸಿದನು.

ಹೀಗೆ ಯೇಸು ಮೊದಲನೆಯ ಶೋಧನೆಯನ್ನು ಎದುರಿಸಿದನು.

## ಎರಡನೆಯ ಶೋಧನೆ (4:5-7)

ಎರಡನೆಯದು ಆತ್ಮೀಕವಾದ ಶೋಧನೆ.

### ಸೈತಾನ (ವಚನಗಳು 5, 6)

ಸೈತಾನನು ಸುಲಭವಾಗಿ ಬಿಟ್ಟು ಕೊಡುವದಿಲ್ಲ. ಮುಂದಿನ ಶೋಧನೆಗಾಗಿ ಒಂದು ಮತ್ತೊಂದು ಸ್ಥಳವನ್ನು ಆರಿಸಿಕೊಂಡನು. ಅದು "ಪರಿಶುದ್ಧನಾದ" ಯೆರೂಸಲೇಮು (ವಚನ 5ಎ), ಈ ಸ್ಥಳವು ಯೂದರಿಗೆ ಅಮೂಲ್ಯವಾದದ್ದು - ಮತ್ತು ಯೇಸುವಿಗೂ ಕೂಡ (ಕೀರ್ತನೆ 48:2; 137:5; ಮತ್ತಾಯ 23:37), ನಂತರ ದೇವಾಲಯ ಶಿಖರದ ಮೇಲೆ ಕರಕೊಂಡು ಹೋದನು (ವಚನ 5ಬಿ). ದೇವಾಲಯದ ಶಿಖರವನ್ನು ವಿನ್ಯಾಸದ ಪ್ರಕಾರ ಕಟ್ಟದೆ ಇದ್ದದ್ದರಿಂದ, ಅದರ ಉನ್ನತ ಸ್ಥಳಕ್ಕೆ ಹೋಗಿರಬಹುದು. ಅದು ದಕ್ಷಿಣ ದಿಕ್ಕಿನಲ್ಲಿದ್ದು, ಪಟ್ಟಣದ ಪೂರ್ಣವಾದ ಸೌಂದರ್ಯವನ್ನು ಅಲ್ಲಿಂದ ವೀಕ್ಷಿಸಬಹುದಿತ್ತು.

ಎತ್ತರದ ಸ್ಥಾನದಲ್ಲಿ ಸೈತಾನನು ಯೇಸುವಿನ ಸಂಗಡ ನಿಂತು, "ನೀನು ದೇವರ ಮಗುನಾಗಿದ್ದರೆ ಮೇಲಿನಿಂದ ದುಮುಕಿ; ಆತನು ನಿನ್ನ ವಿಷಯವಾಗಿ ತನ್ನ ದೂತರಿಗೆ ಅಪ್ಪಣೆ ಕೊಡುವನು ನಿನ್ನ ಕಾಲು ಕಲ್ಲಿಗೆ ತಗಲದಂತೆ ಅವರು ನಿನ್ನನ್ನು ಕೈಗಳಲ್ಲಿ ಎತ್ತಿಕೊಳ್ಳುವರು" ಎಂದನು (ವಚನ 6).

ಯೇಸುವಿನಲ್ಲಿದ್ದ ದೇವರ ಭರವಸವನ್ನು ಸೈತಾನನು ಪರಿಶೋಧಿಸಿದನು. ಇನ್ನೊಂದು ಅರ್ಥದಲ್ಲಿ "ನೀನು ದೇವರಲ್ಲಿ ಭರವಸವಿಟ್ಟಿದ್ದರು, ಅದು *ಎಷ್ಟಿದೆ* ಎಂದು ತೋರಿಸು" ಎಂಬದೇ ಶಿಖರದಿಂದ ಕೆಳಕ್ಕೆ ದುಮುಕುವಷ್ಟು ಭರವಸವಿದೆಯೇ? ಅವನು ಯೇಸುವಿಗೆ ನೀನು ವಾಕ್ಯವನ್ನು ತಿಳಿದಿರುವಂತೆ, ನಾನು ಸಹ ತಿಳಿದಿರುವೆನು ಎಂದು ಹೇಳಿ, ಕೀರ್ತನೆ 91:11, 12; ಕೀರ್ತನೆ 91 ಭರವಸೆಯ ವಾಕ್ಯವನ್ನು ಹೇಳಿದನು. ಮೊದಲ ವಾಕ್ಯದಲ್ಲಿ, "ಪಾರಾತ್ಪರನ ಮರೆಹೊಕ್ಕಿರುವವನು ಸರ್ವಶಕ್ತನ ಆಶ್ರಯದಲ್ಲಿ ಸುರಕ್ಷಿತನಾಗಿರುವನು."

ಎಂತಹ ವಿಚಿತ್ರವಾದ ಶೋಧನೆ, ಅಸಹಜವಾದ ಸಂಗತಿ, ಅಪಾಯಕಾರಿ ಸಂಗತಿ.

### ಕ್ರಿಸ್ತನು (ವಚನ 7)

ಸೈತಾನನು "ಆತ್ಮದ ಖಡ್ಗ"ವನ್ನು (ಎಫೆಸ 6:17) ಹಿಡಿದಿದ್ದನು, ಆದರೆ ಯೇಸು ವಿಶೇಷ ವ್ಯಕ್ತಿತ್ವವನ್ನು ಹೊಂದಿದ್ದನು. "ಯೇಸು ಅವನಿಗೆ, ನೀನು ಸಂಬಂಧವಿಲ್ಲದಂತೆ ವಾಕ್ಯವನ್ನು ಬಳಸುತ್ತಿದ್ದಿ" (ವಚನ 7ಎ). ಆದರೆ ಒಂದೇ ವಾಕ್ಯದಿಂದ ಸತ್ಯವನ್ನು ನೀನು ಸಾಭೀತು ಪಡಿಸುತ್ತಾರೆ. ಆ ವಿಚಾರದ ಬಗ್ಗೆ ಗ್ರಂಥಗಳು ಸತ್ಯವೇದವು ಹೇಳುವಂಥ ಸಕಲ ಸತ್ಯಾಂಶಗಳನ್ನು ಪರಿಶೀಲಿಸಬೇಕು. ದೇವರ ವಾಕ್ಯವನ್ನು ಅರ್ಥವಿಲ್ಲದ ರೀತಿಯಿಂದ ಬಳಸುವದರಿಂದ ಅನೇಕ ತಪ್ಪುಗಳು ಉದ್ಭವಿಸುತ್ತವೆ.[7]

ನಂತರ ಯೇಸು ಧರ್ಮೋಪದೇಶಕಾಂಡ 6:16 ರಿಂದ: "ನಿನ್ನ ಕರ್ತನಾದ ದೇವರನ್ನು ನೀನು ಪರೀಕ್ಷಿಸಬಾರದು" (ವಚನ 7ಬಿ) ಎಂದನು. ಯೇಸುವಿನ ಪ್ರತ್ಯುತ್ತರವನ್ನು ಅಪಾರ್ಥಮಾಡಿಕೊಳ್ಳಬೇಡಿರಿ. ಆತನು ತನ್ನನ್ನೇ ದೇವರೆಂದು ಪ್ರತಿಪಾದಿಸದೆ, ತನ್ನನ್ನು ಪರೀಕ್ಷಿಸಬಾರದು ಎಂದು ಸಹ ಹೇಳಿದೆ. (ಶೇಕಡ 100 ರಷ್ಟು ಮನುಷ್ಯನಾಗಿರುವಾಗ, ಯೇಸು ಶೋಧಿಸಲ್ಪಟ್ಟನು, ಇದನ್ನು ಮರೆಯದಿರಿ.) ದೇವರನ್ನು ಪರೀಕ್ಷಿಸಬೇಡ ಎಂದು ಹೇಳಿದನು.

ಶಿಕರದಿಂದ ಧುಮುಕುವದರಿಂದ ಯೇಸು ದೇವರಲ್ಲಿ ಭರವಸೆ ಇಟಿದ್ದನು ಎಂಬುದಾಗಿದ್ದರು ಯೇಸು ಈ ಕ್ರಿಯೆಯಿಂದ ತಾನೇ ದೇವರುನ್ನು ಪರೀಕ್ಷಿ ಸುತಿದ್ದನು ಎಂಬ ಸತ್ಯವನ್ನು ಯೇಸು ತಿಳಿಸಿದನು, ಅಂದರೆ ದೇವರಲ್ಲಿ ಆತನಿಗೆ ಭರವಸೆವಿಲ್ಲವೇಂಬ ಅರ್ಥ ನಾವು ಯಾರನಾದರು ನಂಬಿದರೆ ಅವರನ್ನು ಪರೀಕ್ಷಿಸುವ ಪ್ರಮೇಯ ಇರುವದಿಲ್ಲ ಅವರ ಮೇಲಿನ ನಂಬಿಕೆ ಕಡಿಮೆಯಾಗುವದಾದರೆ ಮಾತ್ರ ಅವರನ್ನು ಪರೀಕ್ಷಿಸುತ್ತೇವೆ.

ಜೀವಿತದಲ್ಲಿ ಸಂಭವಿಸ ಬಹುದಾದ ಸಕಲ ಕಾರ್ಯಗಳನ್ನು ಎದುರಿಸುವ ಸಲುವಾಗಿ ನಾವು ದೇವರಲ್ಲಿ ಭರವಸೆವಿಡುತ್ತೇವೆ. ನಾವುಗಳು ಕೃತಕವಾಗಿ ಪರೀಕ್ಷಿಸುವ ಅಗತ್ಯ ವಿರುವದಿಲ್ಲ.[8]

ದೇವರ ಚಿತ್ತದಂತೆ, ಯೇಸು ಶಿಖರದಿಂದ ಹಿಂದಿರುಗಿದವನಾಗಿ, ಶೋಧನೆಗೆ ತೆರೆಯನ್ನು ಎಳೆದನು.

## ಮೂರನೆಯ ಶೋಧನೆ (4:8-10)

ಮೂರನೆಯ ಶೋಧನೆ ವಿಶಿಷ್ಟವಾದದ್ದು ಯಾಕೆಂದರೆ ಅದು ಯೇಸುವಿನ ಸೇವೆಯ ಕುರಿತಾದ ಪ್ರಶ್ನೆಯಾಗಿದೆ, ಏನು ಸಂಭವಿಸಿದರೂ ಯೇಸು ತಾನು ಬಂದ ಉದ್ದೇಶವನ್ನು ಈಡೇರಿಸಿದನು. ಸೇವಕನನ್ನು ಧ್ವಂಸ ಮಾಡಲು ಸೈತಾನನು ಅಸಹಾಯಕನಾದಾಗ, ಸೇವಕನ ಸೇವೆಯನ್ನು ನಾಶಮಾಡಲು ಯತ್ನಿಸಿದನು.

### ಸೈತಾನ (ವಚನಗಳು 8, 9)

ಇತರೆ ಶೋಧನೆಗಳಿಗಿಂತ, ಈ ಶೋಧನೆಯು ಬಹು ಕಠೋರವಾಗಿತ್ತು. ಮೊದಲ ಎರಡು ಶೋಧನೆಗಳಲ್ಲಿ ಯೇಸು ಸೈತಾನನ ಅಂತರಾಳದಲ್ಲಿದ್ದ ಮೋಸ ಹಾಗೂ ವಂಚನೆಯನ್ನು ಬಹಿರಂಗ ಪಡಿಸಿದ್ದನು ಮೂರನೆಯ ಶೋಧನೆಯಲ್ಲಿ ಸೈತಾನನೇ ಬಲಹೀನ ನಾಗಿ, ಯೇಸುವನ್ನು ಬಿಟ್ಟುಹೋದನು. ಯೇಸು ಅವನನ್ನು ನೇರವಾದ ನುಡಿಗಳಿಂದ ಹೊರಡಿಸಿಬಿಟ್ಟನು.

"ಬಳಿಕ ಸೈತಾನನು ಆತನನ್ನು ಬಹಳ ಎತ್ತರವಾದ ಬೆಟ್ಟಕ್ಕೆ ಕರಕೊಂಡು[9] ಹೋಗಿ ಪ್ರಪಂಚದ ಎಲ್ಲಾ ರಾಜ್ಯಗಳನ್ನು ಅವುಗಳ ವೈಭವವನ್ನು ಆತನಿಗೆ ತೋರಿಸಿದನು" (ವಚನ 8). ಲೋಕದ ವೈಭವದ ಕುರಿತು ಆಲೋಚಿಸಿರಿ. ಹಿಂದಿನ ಹಾಗೂ ವರ್ತಮಾನದ ವೈಭವವನ್ನು ಗಮನಿಸಿರಿ: ರೋಮ್ ಸಾಮ್ರಾಜ್ಯ, ಗ್ರೀಸ್, ಪರ್ಶಿಯಾ, ಬಿಥಾನ್ಯಾ ಹಾಗೂ ಸಿರಿಯದ, ಹೊಸ ರಾಜ್ಯಗಳ ವೈಭವಗಳು! ಇವೆಲ್ಲವುಗಳು ಆತನ ಮುಂದೆ ಬಂದವು.

ನಂತರ ಸೈತಾನನು, "ನೀನು ನನಗೆ ಸಾಷ್ಟಾಂಗ ನಮಸ್ಕಾರ ಮಾಡಿದರೆ, ಇವುಗಳನ್ನೆಲ್ಲಾ ನಿನಗೆ ಕೊಡುವೆನು ಅಂದನು" (ವಚನ 9). ಸೈತಾನನೇ ಇವೆಲ್ಲವನ್ನು ಕೊಡುವನು ಎಂಬ ಶಂಕೆ ಇದೆ (ನೋಡಿ ಲೂಕ 4:6) - ಯೇಸು ಅದನ್ನು ತಿರಸ್ಕರಿಸಿರಲಿಲ್ಲ. ಇದು ಒಂದು ಯಥಾರ್ಥವಾದ ಕೊಡುಗೆಯಾಗದಿದ್ದರೆ, ಈ ಶೋಧನೆಯು ಉದ್ಭವಿಸುತ್ತಿರಲಿಲ್ಲ.[10] ಯೇಸುವಿನ ದಿನಗಳಲ್ಲೂ ಈ ದಿನಗಳಂತೆಯೇ ಇದ್ದವು. ಲೋಕದ ರಾಜ್ಯಭಾರವನ್ನು ಸೈತಾನನೇ ಹೊಂದಿರುವನು. ಜನರು ಅದಕ್ಕೆ ಒಳಗಾಗಿ, ವಿಧೇಯರಾಗಿ, ಅವನ ಅಪ್ಪಣೆಗಳನ್ನು ಒಪ್ಪಿಕೊಂಡು, ಸೈತಾನನ ಚಿತ್ತಕ್ಕೆ ಒಳಪಡುತ್ತಾರೆ. ಯೇಸು ಅವನನ್ನು "ಇಹಲೋಕಾಧಿಪತಿ" ಎಂದು ಕರೆದಿರುವನು (ಯೋಹಾನ 12:31).[11]

ಇದು ಯೇಸುವಿನ ಸೇವೆಯ ಕುರಿತಾದ ಶೋಧನೆ ಎಂದು ಈಗಾಗಲೇ ತಿಳಿಸಿದ್ದೇನೆ. ಮರಣವನ್ನು, ಬಾಧೆಯನ್ನು ಅನುಭವಿಸದೆ, ಯೇಸು ದೇವರ ಉದ್ದೇಶವನ್ನು ಈಡೇರಿಸ ಬಹುದು ಎಂಬದು ಸೈತಾನನ ಹೇಳಿಕೆಯಗಿತ್ತು.[12] ದೈವೀಕ ಗುರಿ ಸಾಧನೆಗೆ, ಸೈತಾನನು ಅಡ್ಡದಾರಿಯನ್ನು ತೋರಿಸಲು ಮುಂದಾಗಿದ್ದನು. ಸಾಯುವದಕ್ಕಿಂತಲೂ, ಅಡ್ಡಬೀಳುವದು ಸುಲಭವಾಗಿರಲಿಲ್ಲವೇ!

ಈ ಶೋಧನೆಯು ಸೈತಾನನಿಗಿಂತ, ಯೇಸುವಿನ ಮೇಲೆ ಅಧಿಕ ಪ್ರಭಾವ ಬೀರಿರಬಹುದು. ಇದರ ಪರಿಣಾಮವನ್ನು ಅರಿಯಬೇಕೆಂದರೆ, ಯೇಸುವಿನ ಗೆತ್ಸೇಮನೆ ಅನುಭವವನ್ನು ನೆನಪು ಮಾಡಿರಿ, ಆತನ ಮುಖದಲ್ಲಿ ಬೆವರು ಸುರಿದು, ಯೇಸು ತನ್ನ ಹೃದಯವನ್ನು ದೇವರ ಕಡೆಗೆ ತಿರುಗಿಸಿದನು: "ನನ್ನ ತಂದೆಯೇ, ಸಾಧ್ಯವಾಗಿದ್ದರೆ ಈ ಪಾತ್ರೆಯು ನಿನ್ನನ್ನು ಬಿಟ್ಟು

ಹೋಗಲಿ" ಅಂದನು (ಮತ್ತಾಯ 26:39). ಆತನು ಶಿಲುಬೆಯ ಮೇಲೆ "ನನ್ನ ದೇವರೇ, ನನ್ನ ದೇವರೇ ಯಾಕೆ ನನ್ನನ್ನು ಕೈ ಬಿಟ್ಟಿದ್ದಿ" (27:46). ಆದ್ದರಿಂದ ಇದು ಒಂದು ಯಥಾರ್ಥ ವಾದ ಶೋಧನೆಯಾಗಿದೆ.

ಈ ಶೋಧನೆಯಲ್ಲಿ, ಸೈತಾನನ ಅಂದಾಜು ಲೆಕ್ಕವನ್ನು ಗಮನಿಸಿ. ಅವನು ಸಂಪಾದಿಸಿರುವ ಲೋಕದ ಸರ್ವ ವೈಭವಕ್ಕಿಂತಲೂ, ಯೇಸು ಅವನಿಗೆ ಪ್ರಮುಖನಾದ ಸಂಗತಿಯನ್ನು ಗಮನಿಸಿ. ಅನೇಕರು ಯೇಸುವಿನ ಮರಣದ ಪ್ರಾಮುಖ್ಯತೆಯನ್ನು ಅರಿಯದೆ ಇರುವಲ್ಲಿ, ಸೈತಾನನು ನೀಡಿದ ಪ್ರಾಮುಖ್ಯತೆಯನ್ನು ಗಮನಿಸಿರಿ.

**ಕ್ರಿಸ್ತನು (ವಚನ 10)**

ಯೇಸು ಮೊದಲ ಬಾರಿಗೆ ತನ್ನ ಅಧಿಕಾರವನ್ನು ಚಲಾಯಿಸಿ ತನ್ನ ಭಾಷೆಯನ್ನು ಪ್ರಯೋಗಿಸಿದನು. ಹಿಂದಿನ ಶೋಧನೆಗಳಲ್ಲಿ ಜಯವನ್ನು ಸಾಧಿಸಿದ್ದರಿಂದ ಈ ಅಧಿಕಾರವನ್ನು ಚಲಾಯಿಸಿದನು.

"ಸೈತಾನನೇ ತೊಲಗಿ ಹೋಗು!" ಎಂಬ ಕಠಿಣವಾದ ಉತ್ತರವನ್ನು ಯೇಸು ನೀಡಿದನು (ವಚನ 10ಎ). ತಿರಿಗಿ ಯೇಸು ಧರ್ಮೋಪದೇಶಕಾಂಡ 6:13ರ ಆತನ ಖಡ್ಗವನ್ನು ಪ್ರಯೋಗಿಸಿ: "ನಿನ್ನ ದೇವರಾಗಿರುವ ಕರ್ತನಿಗೆ ಅಡ್ಡಬಿದ್ದು ಆತನೊಬ್ಬನನ್ನೆ ಆರಾಧಿಸಬೇಕು" ಅಂದನು (ವಚನ 10ಬಿ). ಶೋಧನೆಯ ಅಂತರಾಳವನ್ನು ಯೇಸುವಿನ ಉತ್ತರವು ಛೇದಿಸಿತು. ಸೈತಾನನು ಆತನಿಗೆ "ನೀನು ನನಗೆ ಸಾಷ್ಟಾಂಗ ನಮಸ್ಕಾರ ಮಾಡಬೇಕು" ಎಂದು ಹೇಳಿದನು. *ಆರಾಧನೆಯನ್ನು* ಹಾಗೂ *ಸೇವಕತ್ವವನ್ನು* ಪ್ರತ್ಯೇಕ ಮಾಡಲಾಗದು ಎಂದು ಯೇಸು ದೃಢಪಡಿಸಿದ್ದನು. ಸೈತಾನನ ಸೇವಕನಾಗದ ಅವನನ್ನು ಆರಾಧಿಸುವದು ಅಸಾಧ್ಯವಾಗಿತ್ತು. ಆಗ ಸೈತಾನನು ಯೇಸುವನ್ನು ಲೋಕಕ್ಕೆ ಹೆಸರಿಗಾಗಿ ಮಾತ್ರ ಅರಸನನ್ನಾಗಿ ಮಾಡುವ ಸಾಧ್ಯತೆಯಿತ್ತು. ಅಂತಿಮವಾಗಿ ಸೈತಾನನೇ ಸರ್ವಶಕ್ತನಾಗುವ ಸಾಧ್ಯತೆಯಿತ್ತು.

ಪುನಃ ಯೇಸು ದೇವರ ಚಿತ್ತದಲ್ಲಿ ದೃಡನಾಗಿ ನಿಂತನು. ದೇವ ರಾಜ್ಯ ಸ್ಥಾಪನೆಗಾಗಿ ಮರಣವನ್ನು ಅನುಭವಿಸಲು ಯೇಸು ಮುಂದಾದನು.

ಸೈತಾನನು ನೀಡುವ ಪ್ರತಿಫಲಕ್ಕಿಂತಲೂ, ದೇವರ ಪ್ರತಿಫಲ ಶ್ರೇಷ್ಟವಾದದ್ದು ಎಂದು ಯೇಸು ನಿರೂಪಿಸಿದನು. ಪ್ರಪಂಚದ ವೈಭವವನ್ನು ತೋರಿಸಿ, ಅವುಗಳು ಉತ್ತಮವಾದದ್ದೆಂದು ಸೈತಾನನು ತಿಳಿಸುತ್ತಾನೆ. ಶೋಧನೆಯ ಕುರಿತು ವಿವರಗಳನ್ನು ಲೂಕನು ನೀಡಿ: "ಬಳಿಕೆ ಸೈತಾನನು ಆತನನ್ನು ಮೇಲಕ್ಕೆ ಕರೆದುಕೊಂಡು ಹೋಗಿ ಕ್ಷಣ ಮಾತ್ರದಲ್ಲಿ ಲೋಕದ ಎಲ್ಲಾ ರಾಜ್ಯಗಳನ್ನು ತೋರಿಸಿದನು" (ಲೂಕ 4:5). ಇದರ ವೈಭವವು ಬಹಳ ಕೀಳಾಗಿದೆ ವಿನಃ ಬಂಗಾರದಂತಿರುವದಿಲ್ಲ, ಆದ್ದರಿಂದ ಯೋಹಾನನು ಇದರ ಕುರಿತು, "ಲೋಕವೂ ಅದರ ಆಶೆಯು ಗತಿಸಿ ಹೋಗುತ್ತದೆ" (1 ಯೋಹಾನ 2:17ಎ) ಎಂದಿರುವನು.

## ಮುಕ್ತಾಯ (4:11)

ಯೇಸು ಕಠಿಣವಾದ ಉತ್ತರವನ್ನು ನೀಡಿದಾಗ, ಸೈತಾನನು ಮೌನವಾದನು - ಅದು ಸೋಲಿನ ಸಂಕೇತ. "ನಂತರ ಸೈತಾನನು ಆತನನ್ನು ಬಿಟ್ಟು ಹೋದನು" ಎಂದು ವಚನ 11 ಹೇಳುತ್ತದೆ. ಅನೇಕ ವರ್ಷಗಳ ಹಿಂದೆ T. B. ಲಾರಿಮೋರ್‌ರವರು ಶೋಧನೆಯ ಬಗ್ಗೆ ಮಾತನಾಡಿದ್ದರು. ಅವರು "ಸೈತಾನನು ಆತನನ್ನು ಬಿಟ್ಟು ಹೋದನು" ಎಂದು ಅಂತ್ಯಗೊಳಿಸಿದಾಗ, ಅವರ ಕೇಳುಗರು ನಿಟ್ಟುಸಿರು ಬಿಟ್ಟರು.

"ಸೈತಾನನು ಸಕಲವಿಧವಾದ ಶೋಧನೆಯನ್ನು ಮುಗಿಸಿ ಸ್ವಲ್ಪಕಾಲ ಆತನನ್ನು *ಬಿಟ್ಟು ಹೊರಟು* ಹೋದನು" (ಲೂಕ 4:13; ಒತ್ತಿ ಹೇಳಿದ್ದು ನನ್ನದು). ನಮ್ಮ ಅಧ್ಯಯನವನ್ನು ಮುಂದುವರೆಸಿದಾಗ, ಸೈತಾನನು ಕ್ರಿಸ್ತನನ್ನು ವಿಧವಿಧವಾಗಿ ಶೋಧಿಸಲು

ಮುಂದುವರೆದ ವಿಚಾರವನ್ನು ನೋಡೋಣ: ಜನರು ಆತನನ್ನು ಲೋಕದ ಅರಸನನ್ನಾಗಿ ಮಾಡಲು ಯತ್ನಿಸಿದರು (ಯೋಹಾನ 6:15). ಜನರು ಆತನಿಂದ ನಿರಂತರವಾದ ಸೂಚಕ ಕಾರ್ಯಗಳನ್ನು ಬಯಸಿದರು (ಲೂಕ 11:29). ಶಿಲುಬೆಗೆ ಹೋಗಬಾರದೆಂದು ಆತನ ಸ್ವಂತ ಶಿಷ್ಯನೇ ತಡೆದನು (ಮತ್ತಾಯ 16:21-23). ಹೇಗೂ ಯೇಸು ಸೇವಕನೊಂದಿಗೆ ಮಾತನಾಡುವಂತೆ ಸೈತಾನನ್ನು ಎದುರಿಸಿದನು. ಆತನು ಜಯ ಹೊಂದಿದನು.

ಕ್ರಿಸ್ತನು ಅರಣ್ಯದಿಂದ ಬಂದು ಆತನ ಸೇವೆಯನ್ನು ಸಿದ್ಧಪಡಿಸಿದನು "ಯೇಸು ಪವಿತ್ರಾತ್ಮನ ಶಕ್ತಿಯಿಂದ ಕೂಡಿದವನಾಗಿ ತಿರುಗಿ ಗಲಿಲಾಯಕ್ಕೆ ಹೋದನು" ಎಂದು ಲೂಕ 4:14ಎ ನಲ್ಲಿ ಹೇಳಿದನು. ಆತನು ಶೋಧನೆಯಿಂದ ಹೊರಬಂದು ಶಿಲುಬೆಗೆ ಸಿದ್ಧವಾದನು. ಆತನು ಪಾಪರಹಿತವಾದ ದೇವರ ಕುಮಾರನಾಗಿದ್ದು, "ಪೂರ್ಣಾಂಗವಾದ ನಿಷ್ಕಂಳಕ ಯಜ್ಞದ ಕುರಿಯಾಗಿದ್ದನು" (1 ಪೇತ್ರ 1:19).

ಶೋಧನೆಯ ಕಥೆಯಿಂದ ಅನೇಕ ಪಾಠಗಳನ್ನು ನಾವುಗಳು ಕಲಿಯಬಹುದಾಗಿದೆ. ಶೋಧನೆಗಳನ್ನು ಜಯಿಸಲು, ದೇವರ ವಾಕ್ಯದ ಜ್ಞಾನದಿಂದ, ಹಾಗೂ ಅವುಗಳನ್ನು ಬಾಯಿ ಪಾಠಮಾಡುವದಿಂದ ಸಿದ್ಧರಾಗಬೇಕು ಅದು ಯಾಕೋಬನು ಸತ್ಯವನ್ನು ಪ್ರಕಟಿಸುತ್ತದೆ. "ಸೈತಾನನನ್ನು ಎದುರಿಸಿ, ಅವನು ನಿಮ್ಮನ್ನು ಬಿಟ್ಟು ಓಡಿಹೋಗುವನು." ನಾವು ಶೋಧನೆ ಒಳಗಾಗುವಾಗ, ಯೇಸು ನಮಗೆ ಅನುಕಂಪ ತೋರಿಸುತ್ತಾನೆ. ಇದು ನಮಗೆ ಶ್ರೇಷ್ಟವಾದ ಸಂಕೇತವಾಗಿದೆ. ಇಬ್ರಿಯ ಬರಹಗಾರನು ಹೇಳಿರುವದೇನೆಂದರೆ,

> ಯಾಕಂದರೆ ನಮಗಿರುವ ಮಹಾಯಾಜಕನು ನಮ್ಮ ನಿರ್ಬಲಾವಸ್ಥೆಯನ್ನು ಕುರಿತು ಅನುತಾಪವಿಲ್ಲದವನಲ್ಲ; ಆತನು ಸರ್ವ ವಿಷಯಗಳಲ್ಲಿ ನಮ್ಮ ಹಾಗೆ ಶೋಧನೆಗೆ ಗುರಿಯಾದನು, ಪಾಪ ಮಾತ್ರ ಮಾಡಲಿಲ್ಲ. ಆದದರಿಂದ ನಾವು ಕರುಣೆಯನ್ನು ಹೊಂದುವಂತೆಯೂ ಆತನ ದಯೆಯಿಂದ ಸಮಯೋಚಿತವಾದ ಸಹಾಯವು ನಮಗೆ ದೊರೆಯುವಂತೆಯೂ ಧೈರ್ಯದಿಂದ ಕೃಪಾಸನದ ಮುಂದೆ ಬರೋಣ (ಇಬ್ರಿಯ 4:15, 16).

ದೇವರ ಸಹಾಯದಿಂದ ನಾವುಗಳು ಸಹ ಸೈತಾನನನ್ನು ಎದುರಿಸಬಹುದಾಗಿದೆ![14]

## ಮಾಹಿತಿ

"ಯೇಸುವಿನ ಶೋಧನೆ" ಮೇಲಿರುವ ಒಂದು ಚಾರ್ಟನ್ನು ದೃಶ್ಯಸಾಧನವಾಗಿ ನೀವು ಉಪಯೋಗಿಸಲು ಬಯಸಬಹುದು. ಇದನ್ನು ಒಂದು ಬರಹದ ಹಲಗೆಯ ಮೇಲೆ ಅರಣ್ಯದಲ್ಲಿ ಕರ್ತನು ಸೈತಾನನ್ನು ಎದುರಿಸಿದ ಬಗ್ಗೆ ವಿವರಿಸಬಹುದು.

ಎಡಗಡೆ ಇರುವ ಅಂಕಣದಲ್ಲಿ ಸೈತಾನನ ಶೋಧನೆಯನ್ನು ಸೂಚಿಸುತ್ತದೆ. ಬಲಗಡೆಯ ಅಂಕಣದಲ್ಲಿ ಯೇಸುವಿನ ಪ್ರತ್ಯುತ್ತರವನ್ನು ಕಾಣಬಹುದು. ಪಾಠದ ಮುಕ್ತಾಯದಲ್ಲಿ ನಾನು ಬರಹದ ಹಲಗೆಯ ಮೇಲೆ ಯೇಸುವನ್ನು ಸೂಚಿಸುತ್ತ "ವಿಜಯ!" ಎಂಬ ಪದವನ್ನು ಬದಲಾಯಿಸುವನು. ಈ ದೃಶ್ಯ ಸಾಧನವನ್ನು ಒಂದು ಪ್ರೊಜಕ್ಟರ್‌ಿಂದ ಉಪಯೋಗಿಸ ಬಹುದು ಇದನ್ನು ಬರಹದ ಹಲಗೆಯ ಮೇಲೆ ಅಥವಾ ಒಂದು ದೊಡ್ಡ ಕಾಗದದ ಮೇಲೆ ಅಥವಾ ಒಂದು ರಟ್ಟಿನ ಮೇಲೆ ಬರೆದು ತೋರಿಸಬಹುದು.

ವಿದ್ಯಾರ್ಥಿಗಳು, ವಿಶೇಷವಾಗಿ ಯೌವನಸ್ಥರು, ಸೈತಾನನ ಕೊಂಬು ಮತ್ತು ಬಾಲವನ್ನು ನೋಡಿ ಉಲ್ಲಾಸ ಹೊಂದಿರಬಹುದು. ಸಾತನಿನ ಅಪಜಯವನ್ನು ಚಿತ್ರಿಕರಿಸುವಂತೆ ಈ ಚಿತ್ರವನ್ನು ಹೆಗಾದರು ಬಳಸಲು ಸಾಧ್ಯವಾಗುವಂತೆ ತಯಾರಿಸಿಕೊಳ್ಳುವೆನು. ಸೈತಾನನು ಕೊಂಬುಗಳಿಂದ ಮತ್ತು ಉದ್ದವಾದ ಬಾಲವನ್ನು ಹೊಂದಿದವನಂತೆ ನಮಗೆ ಕಾಣಿಸಿಕೊಳ್ಳುವುದಿಲ್ಲ ಅಂತ ಚಿತ್ರವನ್ನು ಸೈತಾನನಿಗೆ ಬಳಸಲು ನಿಮಗೆ ಇಷ್ಟವಿಲ್ಲದಿದ್ದರೆ ಒಂದು

ಕಿರಿ ಆಕಾರದಲ್ಲಿರುವ ದೃಶ್ಯವನ್ನು ಸೈತಾನನ್ನು ಸೂಚಿಸುವಂತ ಚಿತ್ರವನ್ನು ಬಳಸಬಹುದು.

ನೀನು ಜೀವಿಸುವಂತ ಪ್ರಾಂತಕ್ಕೆ ಸರಿಹೊಂದಿದರೆ ಈ ಪಾಠವನ್ನು "ಸೈತಾನನ ವಿರುದ್ಧ ಕ್ರಿಸ್ತನು" ಎಂದು ಕರೆಯಬಹುದು ಮತ್ತು ಮುಷ್ಠಿಕಾಳಗದ ಸಾದೃಶ್ಯವನ್ನು "ನನಗೆ ಈ ಪೋಟಿಯು ಮುಷ್ಠಿಕಾಳಗದಂತಿದೆ: 'ಸೈತಾನನ ವಿರುದ್ಧ ಕ್ರಿಸ್ತನು' ಎಂಬ ಪೀಠಿಕೆಯನ್ನು ಉಪಯೋಗಿ ಸಬಹುದು. ಸೈತಾನನು ಗುದ್ದಿದಾಗ ಯೇಸು ಅದನ್ನು ತಡೆದು ಮುಷ್ಠಿಯಿಂದ ಹೊಡೆದನು. ಮತ್ತೇ ಸೈತಾನನು ಎರಡನೆಯ ಬಾರಿ ಗುದ್ದಿದಾಗ, ಹೀಗೆ ಮುಂದುವರಿಯಿತು. ಸಂಪ್ರದಾಯಕ ವಾಗಿ ಮುಷ್ಠಿಯುದ್ಧದಲ್ಲಿ ಇರುವವರು ಬಿಳಿ ಮತ್ತು ಕಪ್ಪು ಆನೆಯ ಸೊಂಡಿಲಿನಂತಿರುವುದನ್ನು ಧರಿಸುವುದು 'ಕೆಟ್ಟದ್ದಕ್ಕೆ ವಿರುದ್ಧವಾಗಿ ಒಳ್ಳೆಯದನ್ನು' ಸೂಚಿಸುತ್ತದೆ ಆತ್ಮಸಂಬಂಧವಾದ ಮುಖ್ಯತ್ವದೊಂದಿಗೆ ಒಂದು ರೋಮಾಂಚನೆಯನ್ನು ಉಂಟುಮಾಡುವ ನಿಜವಾದ ಯುದ್ಧವಾಗಿದೆ."

---

ಟಿಪ್ಪಣಿಗಳು


[1]ಈ ಪ್ರಸಂಗದಲ್ಲಿ ಹೆಚ್ಚಿನ ಭಾಗದಿಂದ ಬಂದಿದೆ. G. Campbell Morgan, *The Crises of the Christ* (New York: Fleming H. Revell Co., 1936), 162-99. [2]ಶೋಧನೆ ಎನ್ನುವ ಹೆಚ್ಚಿನ ವಿವರಗಳಿಗೆ ಈ ಸಂಚಿಕೆಯಲ್ಲಿನ "ಹತ್ತಿರ ಬಂದಿದೆ" ಎನ್ನುವ ಪಾಠವನ್ನು ನೋಡಿ. [3]ಕರ್ತನಾದ ಯೇಸುವಿನೊಂದಿಗೆ ಸಹವಾಸದಲ್ಲಿದ ಕಾಡು ಪ್ರಾಣಿಗಳು ಎಂದು ಮಾರ್ಕ 1:13 ಹೇಳುತ್ತದೆ. [4]ಈ ಅರಣ್ಯ ಎಲ್ಲದಿಯೋ ನಮಗೆ ಹೇಳಿಲ್ಲ, ಇದು ಯೆಹೂದ್ಯರ ಅರಣ್ಯವಾಗಿರಬಹುದು. ಅಲ್ಲಿಯೇ ಸಿದ್ಧವಾಗಿ ತನ್ನ ಕೆಲಸದಲ್ಲಿ ಹೆಚ್ಚಿನ ಭಾಗವನ್ನು ಅಲ್ಲಿಯೇ ಮಾಡಿದನು (ಮತ್ತಾಯ 3:1, 3; 11:7; ಲೂಕ 1:80; 3:1, 2) ಭೂಪಟವನ್ನು ನೋಡಿ. [5]ನೀರು ಕುಡಿಯುತ್ತಿದ್ದರೆ ನಲವತ್ತು ದಿನಗಳು ಊಟವಿಲ್ಲದೆ ಇರಬಹುದೆಂದು ಆಧುನಿಕ ಯುಗದಲ್ಲಿ ಪ್ರದರ್ಶಿಸಲ್ಪಟ್ಟಿದೆ. [6]ಪ್ರತಿ ಶೋಧನೆಯನ್ನು ಪರಿಶೀಲಿಸಿ ನೋಡು ವುದರಿಂದ ಶೋಧನೆಗಳನ್ನು ಅಭ್ಯಾಸಿಸುವುದರಲ್ಲಿ ಒಳ್ಳೆಯದಿದೆ. ಅದು ಯಾಕೆ ತಪ್ಪು, ಕ್ರಿಸ್ತನು ಅವುಗಳನ್ನು ಹೇಗೆ ಎದುರಿಸಿದನು. ಸೈತಾನನಿಂದ ಆ ಸಲಹೆಗಳು ಕೊಟ್ಟಿರುವದರಿಂದ ಅವು ತಪ್ಪಾಗಿವೆ ಎಂದು ಕೆಲವರು ಭಾವಿಸಿದ್ದಾರೆ. ವಿಷದಕರವಾಗಿ "ಬೆಳಕಿನ ದೂತ"ನಂತೆ ಸೈತಾನನು ಬರುತ್ತಾನೆ (2 ಕೊರಿಂಥ 11:14). ಪ್ರತ್ಯೇಕವಾದ ಶೋಧನೆ ಯಾಕೆ ತಪ್ಪು ನಾವು ಗ್ರಹಿಸದೆ ಹೋದರೆ ಸೈತಾನನು ನಮ್ಮನ್ನು ಸುಲಭವಾಗಿ ಮೋಸಗೊಳಿಸುತ್ತಾನೆ. [7]ದೇವರ ವಾಕ್ಯಗಳನ್ನು ಹೀಗೆ ದುರುಪಯೋಗಿಸಿ ಕೊಂಡ ಉದಾಹರಣೆಗಳನ್ನು ಕೊಡಬಹುದು. [8]ನಿನ್ನ ದೇವರಾದ "ಕರ್ತನಿಗೆ ಅವಿವೇಕವಾದ ಪರೀಕ್ಷೆ ಇಡಬಾರದೆಂದು" ಸಹ ಲೀವಿಂಗ್ ಬೈಬಲ್ ಹೇಳುತ್ತದೆ. [9]ಈ ಶೋಧನೆಗೆ ಪರಂಪರ್ಯವಾದ ಸ್ಥಳ "ಟಬೋರ" ಪರ್ವತ. ಆದರೆ ಅದು ಯಾವ ಪರ್ವತ ಎಂದು ಲೇಖನ ಭಾಗವು ಹೇಳುವುದಿಲ್ಲ (ಭೂಪಟವನ್ನು ನೋಡಿ). [10]ಈ ಶೋಧನೆಯಲ್ಲಿ ಸುಳ್ಳು ಇದೆ ಎಂದು ಕೆಲವರು ನಂಬುತ್ತಾರೆ. "ತಾನು ಏನು ಕೊಡುವುದಿಲ್ಲ ವೋ, ಅದನ್ನು ಸೈತಾನನು ವಾಗ್ದಾನ ಮಾಡಿದ್ದಾನೆ" ಆ ರೀತಿಯ ಶೋಧನೆ ನೀನು ಜೋತೆ ನನ್ನ ನಿನ್ನ ಜೊತೆ ಆಟವಾಡಬಹುದು, ಆದರೆ ಕ್ರಿಸ್ತನ ಜೊತೆ ಕಂಡಿ ಅದು ಆಟವಾಡುವುದಲ್ಲ. ಯಾಕೆಂದರೆ ಲೋಕಾತ್ಮವನ್ನು ಕುರಿತ ಬಹು ಸನ್ನಿಹಿತವಾದ ಜ್ಞಾನ ಆತನಲ್ಲಿ ಇದೆ.


[11]ಈ ರೀತಿಯ ಬಾವನೆಯನೇ ಪೌಲನು 2 ಕೊರಿಂಥ 4:4ರಲ್ಲಿ ವ್ಯಕ್ತಪಡಿಸಿದ್ದಾನೆ. ಅಂತಿಮ ಅಧಿಕಾರ, ಶಕ್ತಿ, ದೇವರಿಗೆ ಸಲುತ್ತದೆ. ಸಮಸ್ತವು ಆತನ ವಶದಲ್ಲಿದೆ. ಸೈತಾನನಿಗೆ ಯಾವ ಶಕ್ತಿಯಾರೂ ಇದ್ದರೆ ಅದು ದೇವರು ಕೊಟ್ಟಿರುವುದೇ ಅಥವಾ ಅನುಗ್ರಹಿಸಿರುವುದೇ ಸೈತಾನನ ಕಾರ್ಯಕಾಲಪಗಳಿಗೆ ದೇವರು ಸರಿ ಹದ್ದುಗಳನ್ನು ನಿರ್ಮಿಸಿದ್ದಾನೆ. ದೇವರು ಸೈತಾನನ ಕಾರ್ಯಕಾಲಪಗಳನ್ನು ಸಂಕಲ್ಪದಲ್ಲಿ ಇಡುತ್ತಾನೆ. (ಯೋಬನ ಗ್ರಂಥದ ಮೊದಲ ಎರಡು ಅಧ್ಯಾಯನಗಳ್ಳು ಓದಿ.) [12]ಯೇಸು ಮರಣ ಹೊಂದಿದಿದರೆ ನಿನಗೆ, ನನಗೆ ರಕ್ಷಣೆ ಸಿಗುತ್ತಿರಲಿಲ್ಲ ಎಂದು ನಮಗೆ ಗೊತ್ತು (ಇಬ್ರಿಯ 9:22; ಎಫೆಸ 1:7). ಇತರರ ವಿಷಯ ಪಕ್ಕದಲ್ಲಿಟ್ಟು ತನ್ನನ್ನು ಕುರಿತು ತಾನು ಆಲೋಚನೆ ಮಾಡಿಕೋ ಎಂದು ಸೈತಾನನು ಹೇಳಿದ್ದಾನೆ. ಕ್ರಿಸ್ತನು ರಾಜನಾಗಿ ಜನ್ಮಿಸಿದ್ದಾನೆ. ಸೈತಾನನು ಆತನಿಗೆ ಕಿರೀಟವನ್ನು ಮನುಷ್ಯರು ಒಳಗಾಗುವುದನ್ನು ಕೊಟ್ಟನು. [13]Tinsel ಅಂದರೆ ಆ ಸಂಘಟನೆಯ ನಂತರ, ಆ tinsel ಬಿದ್ದ ಹೋಗಿದೆ. [14]ಇದನ್ನು ಪ್ರಸಂಗದಲ್ಲಿ ಉಪಯೋಗಿಸುವಾಗ, ದೇವರ ಸಹಾಯವನ್ನು ಕೋರುವವನು

ದೇವರೊಂದಿಗೆ ಸರಿಯಾದ ಸಂಬಂಧಬಾಂಧ್ಯವನ್ನು ಇಟ್ಟಿಕೊಳ್ಳಬೇಕು. ಮೊದಲ ವಿಶ್ವಾಸ, ವಿದೇಯತೆಯಿಂದ ದೇವರ ಕುಮಾರನಾಗಿ ಬೇಕು (ಮಾರ್ಕ 16:16; ಅಪೊಸ್ತಲರ ಕೃತ್ಯಗಳು 2:38). ಆತನೊಂದಿಗೆ ಸರಿಯಾ ಸಹವಾಸದಲ್ಲಿ ನಿಂತು ಕೊಂಡಿರಬೇಕು. "ಸೈತಾನನ್ನು ತುಳಿದಿ ಹಾಕು" ಮೊದಲು ಒಬ್ಬನು "ದೇವರಿಗೆ ಒಳಗಾಗಿರಿ" ಎಂದು ಯಾಕೋಬನು 4:7ರಲ್ಲಿ ಹೇಳಿದ್ದಾನೆ.

## ಯೇಸುವಿಗಾದ ಶೋಧನೆ


**ಮತ್ತಾಯ 4:1-11**








“ನೀನು ದೇವರ ಮಗನಾಗಿದ್ದರೆ ಈ ಕಲ್ಲುಗಳು ರೊಟ್ಟಿಯಾಗುವಂತೆ ಅಪ್ಪಣೆಕೊಡು ಎಂದು ಹೇಳಲು” (ವಚನ 3).




“ಆತನು, ಮನುಷ್ಯನು ರೊಟ್ಟಿತಿಂದ ಮಾತ್ರದಿಂದ ಬದುಕುವದಿಲ್ಲ, ದೇವರ ಬಾಯಿಂದ ಹೊರಡುವ ಪ್ರತಿಯೊಂದು ಮಾತಿನಿಂದಲೂ ಬದುಕುವನು” (ವಚನ 4).





“ನೀನು ದೇವರ ಮಗನಾಗಿದ್ದರೆ ಕೆಳಕ್ಕೆ ದುಮುಕು; ಎಂದು ಬರೆದಿದೆ ...” (ವಚನ 6).

**ಭರವಸೆ** **ಮತ್ತು** **ಶೋಧನೆ**

“ನಿನ್ನ ದೇವರಾಗಿರುವ ಕರ್ತನನ್ನು ಪರೀಕ್ಷಿಸಬಾರದು ಎಂಬುದಾಗಿ ಸಹ ಬರೆದದೆ ಅಂದನು” (ವಚನ 7).




“ನೀನು ನನಗೆ ಸಾಷ್ಟಾಂಗ ನಮಸ್ಕಾರ ಮಾಡಿದರೆ ಇವುಗಳನ್ನೆಲ್ಲಾ ನಿನಗೆ ಕೊಡುವೆನು ಅಂದನು” (ವಚನ 9).




“ಸೈತಾನನೇ, ನೀನು ತೊಲಗಿ ಹೋದಗರು, ನಿನ್ನ ದೇವರಾಗಿರುವ ಕರ್ತನಿಗೆ ಅಡ್ಡಬಿದ್ದು ಆತನೊಬ್ಬನನ್ನೇ ಆರಾಧಿಸಬೇಕು” (ವಚನ 10).

(ಈ ದೃಶ್ಯಸಾಧನವನ್ನು ವಿವರಿಸಿದ ಹಂತದಲ್ಲಿ ಈ ಕೆಳಗಿನ ಚಿತ್ರವನ್ನು ಮೇಲೆ ಮೊದಲನೆಯ ಅಂಕಣದಲ್ಲಿ ಪ್ರದರ್ಶಿಸಿರಿ)

